ಜಿಲ್ಲಾ ಪಂಚಾಯತ, ಧಾರವಾಡ

# ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

ಸಂಖ್ಯೆ:ಜಿ2/ಶಾಶಿಲ/ಹೊಪ್ರಾಶಾ/ಕೆ.ಇ.ಬೋ.ಪ್ರಾ.ಶಾ/1-5/9/2018-19 2110 ದಿನಾಂಕ : 25-11-2018

ನಮೂನೆ-2

(ನಿಯಮ 3 ಉಪನಿಯಮ 5[ಬಿ])

**ಕರ್ನಾಟಕ ಎಜ್ಯುಕೇಶನ್ ಬೋರ್ಡ್, ಸ್ಟೇಷನ್ ರಸ್ತೆ, ಮಾಳಮಡ್ಡಿ, ಧಾರವಾಡ** ಈ ಆಡಳಿತ ಮಂಡಳಿಯವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ 1-1995) ಸೆಕ್ಷನ್ 30-31 ರಂತೆ ಈ ದಿನ ದಿನಾಂಕ: 25-11-2018 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು **ಧಾರವಾಡ ಶಹರದ ದೊಡ್ಡನಾಯ್ಕನಕೊಪ್ಪ ಗ್ರಾಮದ ಸರ್ವೆ ನಂ: 41ಬಿ** ಇಲ್ಲಿ ಮಾನ್ಯ ಆಯುಕ್ತರು ಹಾಗೂ ಮೇಲ್ಮನವಿ ಪ್ರಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಮುಂದೆ ದಾಖಲಿಸಿದ **ಮೇಲ್ಮನವಿ ಅರ್ಜಿ ಸಂಖ್ಯೆ: ಸಿ.ಪಿ.ಐ 06/2018-19** ನೇದ್ದರಲ್ಲಿ ದಿನಾಂಕ: 29-10-2018 ರಂದು ಹೊರಡಿಸಿದ ಆದೇಶದನ್ವಯ ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. | ಆಡಳಿತ ಮಂಡಳಿಯವರು ಆನ್ ಲೈನ್‌ನಲ್ಲಿ ದಾಖಲಿಸಿದ ಅರ್ಜಿ ಸಂಖ್ಯೆ ಹಾಗೂ ದಿನಾಂಕ : | ಆನ್ ಲೈನ್ ಅರ್ಜಿ ಸಂಖ್ಯೆ:180999, ದಿನಾಂಕ: 09-04-2018 |
| 2. | ನೋಂದಣಿ ಕ್ರಮ ಸಂಖ್ಯೆ : | 09/2018-19 |
| 3. | ಪ್ರಾಥಮಿಕ ಶಾಲೆಯ ಹೆಸರು : | ಕೆ.ಇ.ಬೋರ್ಡ್ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ, ಕೃಷಿ ನಗರ, ಕೆಲಗೇರಿ ರಸ್ತೆ, ಧಾರವಾಡ. |
| 4. | ಶಿಕ್ಷಣ ಸಂಸ್ಥೆಯ ವರ್ಗೀಕರಣ : | ಪ್ರಾಥಮಿಕ ಶಿಕ್ಷಣ (ಸಹ ಶಿಕ್ಷಣ) |
| 5. | ಅನುಮತಿ ನೀಡಿದ ತರಗತಿ : | 1 ನೇ ತರಗತಿ : 2018-19 ನೇ ಸಾಲಿನಲ್ಲಿ<br>2 ನೇ ತರಗತಿ : 2019-20 ನೇ ಸಾಲಿನಲ್ಲಿ<br>3 ನೇ ತರಗತಿ : 2020-21 ನೇ ಸಾಲಿನಲ್ಲಿ<br>4 ನೇ ತರಗತಿ : 2021-22 ನೇ ಸಾಲಿನಲ್ಲಿ<br>5 ನೇ ತರಗತಿ : 2022-23 ನೇ ಸಾಲಿನಲ್ಲಿ |
| 6. | ಅನುಮತಿ ನೀಡಿದ ಮಾಧ್ಯಮ : | ಆಂಗ್ಲ ಮಾಧ್ಯಮ |
| 7. | ಶುಲ್ಕ ಪಾವತಿ ಮಾಡಿರುವುದು : | ನೋಂದಣಿ ಹಾಗೂ ಸಂಸ್ಕರಣ ಶುಲ್ಕ : ರೂ. 50,000/-ಗಳನ್ನು ಪಾವತಿ ಮಾಡಿರುತ್ತಾರೆ. ಎಸ್.ಬಿ.ಐ. ಧಾರವಾಡ ಚಲನ್ ಸಂಖ್ಯೆ: ಸಿ ಆರ್ 0418020200004501 ದಿನಾಂಕ: 10-04-2018. |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 09/2018-19 ಪುಟ ಸಂಖ್ಯೆ: 4 ವಾಲ್ಯೂಮ ಸಂಖ್ಯೆ: 2 ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಈ ಅನುಮತಿ/ನೋಂದಣಿಯು ಮಾನ್ಯ ಆಯುಕ್ತರು ಹಾಗೂ ಮೇಲ್ಮನವಿ ಪ್ರಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಮುಂದೆ ದಾಖಲಿಸಿದ ಮೇಲ್ಮನವಿ ಅರ್ಜಿ ಸಂಖ್ಯೆ: ಸಿ.ಪಿ:ಐ 06/2018-19 ನೇದ್ದರಲ್ಲಿ ದಿನಾಂಕ: 29-10-2018 ರಂದು ಹೊರಡಿಸಿದ ಆದೇಶ ಹಾಗೂ ಅದರಲ್ಲಿ ವಿಧಿಸಿದ ಷರತ್ತಿಗೊಳಪಟ್ಟಿರುತ್ತದೆ.

2. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೋಂದಣಿ) ನಿಯಮಗಳು, 1997 ರ ನಿಯಮ 3, 4 ಮತ್ತು 5 ಕ್ಕೆ ಒಳಪಟ್ಟಿರುತ್ತದೆ.

3. **ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಮಾಹಿತಿ 2012 ದಿನಾಂಕ: 15-11-2012 ರಂತೆ ಈ ನೋಂದಣಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಹಾಗೂ ಸದರಿ ಆದೇಶದಡಿಯಲ್ಲಿ ಕಾಲ ಕಾಲಕ್ಕೆ ಶಾಲಾ ಶಿಕ್ಷಣ ಪದ್ಧತಿಯ ಬದಲಾವಣೆ ಕುರಿತು ರೂಪಿಸಲಾಗುವ ನಿಯಮಗಳನ್ನು ಪಾಲನೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.**

4. **ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 09 ಪಿಜಿಸಿ 2017, ದಿನಾಂಕ: 07-01-2017 ರಲ್ಲಿ ಸೂಚಿಸಲಾಗಿರುವ ಮಾರ್ಗಸೂಚಿ ಹಾಗೂ ವಿಧಿಸಲಾಗಿರುವ ಷರತ್ತುಗಳ ಪಾಲನೆಯಾಗಿರತಕ್ಕದ್ದು.**

5. ಸಂಸ್ಥೆಯ ಆಡಳಿತ ಮಂಡಳಿಯು ಮೇಲೆ ತಿಳಿಸಿರುವ ನಿಯಮಗಳಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

6. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣ, ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

7. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

8. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ, ಅದೇ ಸರ್ವೆ ನಂಬರ್‌ದಲ್ಲಿ ಮಾತ್ರ ತೆರೆಯತಕ್ಕದ್ದು, ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

9. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.

10. **ಶಾಲೆಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆಯ ಬಗ್ಗೆ ಶಿಕ್ಷಣ ಇಲಾಖೆ ಮತ್ತು ಗೃಹ ಇಲಾಖೆಗಳು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಎಲ್ಲಾ ಭದ್ರತಾ ಕ್ರಮಗಳನ್ನು ಕೈಕೊಳ್ಳತಕ್ಕದ್ದು. ಹಾಗೂ ಅಗತ್ಯ ಎಲ್ಲಾ ಭದ್ರತಾ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.**

11. **ಶಾಲೆಯನ್ನು ಇಲಾಖೆಯ ಪೂರ್ವಾನುಮತಿ ಪಡೆಯದೇ ಬೇರೆ ಆಡಳಿತ ಮಂಡಳಿ/ಸಂಸ್ಥೆಗೆ ಪರಭಾರೆ ಮಾಡತಕ್ಕದ್ದಲ್ಲ.**

12. ಶಾಲೆಯನ್ನು ಮುಚ್ಚುವಂತಹ ಸಂದರ್ಭ ಬಂದಾಗ, ಶಾಲೆಯನ್ನು ಮುಚ್ಚುವ ಮುನ್ನ ಇಲಾಖೆಯ ಪೂರ್ವಾನುಮತಿ ಪಡೆದು ಶಾಲೆಯಲ್ಲಿನ ಎಲ್ಲಾ ಶೈಕ್ಷಣಿಕ ದಾಖಲೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸುಪರ್ದಿಗೆ ನೀಡತಕ್ಕದ್ದು.

13. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಅಧಿನಿಯಮ 1983 (ಕರ್ನಾಟಕ ಆ್ಯಕ್ಟ ಸಂಖ್ಯೆ: 1/95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

14. ಈ ಪ್ರೌಢ ಶಾಲೆ ನೋಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 175 ಪಿಎಂಸಿ 95, ದಿನಾಂಕ: 07–09–1998 ಮತ್ತು ದಿನಾಂಕ: 29–12–1998 ರ ಪ್ರಕಾರ **ಶಾಶ್ವತ ಅನುದಾನರಹಿತವಾಗಿರುತ್ತದೆ.**

15. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 100/- ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡಿರತಕ್ಕದ್ದು.

16. ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ತಪ್ಪದೇ ಅಳವಡಿಸತಕ್ಕದ್ದು.

17. ಶಾಲಾ ಕೆಲಸದ ವೇಳೆ ಮತ್ತು ರಜಾ ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

18. **ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತ ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ಕನಿಷ್ಠ ದಾಖಲಾತಿ 50 ಹಾಗೂ ಹಾಜರಾತಿ 40 ಇರತಕ್ಕದ್ದು.**

19. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂಧ 36–39 ರಂತೆ ನೊಂದಾಯಿಸಿದ ಎಲ್ಲ ಶಾಲೆಗಳು ರೆಕಗ್ನೇಷನ್ ಹಾಗೂ ಪ್ರಾವಿಜನಲ್ ರೆಕಗ್ನೇಷನ್ ವ್ಯಾಪ್ತಿಗೆ ಬರುವುದು.

20. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

21. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

22. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.

23. **ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ, ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳಬೇಕು.**

24. ಶಾಲೆಗಳಲ್ಲಿ ಅಗ್ನಿನಂದಕ ಅಳವಡಿಸಿ ಎಲ್ಲ ಶಿಕ್ಷಕರಿಗೆ **ಮತ್ತು** ಇತರ ಸಿಬ್ಬಂದಿಗೆ ಅದರ ಉಪಯೋಗದ ಬಗ್ಗೆ ತರಬೇತಿ ನೀಡುವುದು.

25. ಶಾಲೆಯಲ್ಲಿ ನೇಮಕ ಮಾಡಿಕೊಳ್ಳುವ ಪ್ರತಿಯೊಬ್ಬ ಬೋಧಕ / ಬೋಧಕೇತರ ಸಿಬ್ಬಂದಿಗೂ ಕರ್ನಾಟಕ ನಾಗರೀ ಸೇವಾ ನಿಯಮದ ಪ್ರಕಾರ ಸೇವಾ ಪುಸ್ತಕ ತೆರೆದು ಅದರಲ್ಲಿ ಅವರ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲಿಸಿ ನಿರ್ವಹಿಸುವುದು.

26. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್‌ಇಪಿ 2005, ದಿನಾಂಕ: 12-01-2006 ಹಾಗೂ ಕಾಲ ಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು, ಶಿಕ್ಷಕರ ಸೇವಾ ಪುಸ್ತಕ ನಿರ್ವಹಣೆ ಮಾಡುವುದು ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಠ ಮೂಲ ವೇತನ ವನ್ನು ಬ್ಯಾಂಕ ಮೂಲಕ ಪಾವತಿಸತಕ್ಕದ್ದು.

27. ಸಿಬ್ಬಂದಿ ಮಾದರಿ ರಚನೆಯ ಪ್ರಕಾರ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ದೊರಕಿಸಬೇಕಾದ ಎಲ್ಲ ಸೇವಾ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

28. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್‌ಇಪಿ 2005, ದಿನಾಂಕ: 12-01-2006 ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ, ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.

29. ಈ ಶಾಲಾ ನೋಂದಣಿಯನ್ನು 2018-19 ನೇ ಸಾಲಿಗೆ 1 ನೇ ತರಗತಿಯನ್ನು ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ನೋಂದಾಯಿಸಿರುವುದರಿಂದ 2 ನೇ ತರಗತಿಯನ್ನು 2019-20 ನೇ ಸಾಲಿನಿಂದ, 3 ನೇ ತರಗತಿಯನ್ನು 2020-21 ನೇ ಸಾಲಿನಿಂದ, 4 ನೇ ತರಗತಿಯನ್ನು 2021-22 ನೇ ಸಾಲಿನಿಂದ ಹಾಗೂ 5 ನೇ ತರಗತಿಯನ್ನು 2022-23 ನೇ ಸಾಲಿನಿಂದ ಸ್ವಾಭಾವಿಕ ಬೆಳವಣಿಗೆ ಆಧಾರದ ಮೇಲೆ ಪ್ರಾರಂಭಿಸತಕ್ಕದು.

30. ಪ್ರಾರಂಭಿಸಲು ಉದ್ದೇಶಿಸಿರುವ ಶಾಲೆಯು ಬಾಡಿಗೆ ಕಟ್ಟಡ ಹೊಂದಿದ್ದಲ್ಲಿ, ಶಾಲೆ ಪ್ರಾರಂಭಿಸಲು ಉದ್ದೇಶಿಸಿರುವ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪಡೆದು ಶಾಲೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವುದು.

31. ಆಡಳಿತ ಮಂಡಳಿಯು ಕನಿಷ್ಠ ರೂ. 5 ಲಕ್ಷ ನಗದು ಠೇವಣಿ ಅಥವಾ ಸಮ ಮೊತ್ತದ ಸ್ಥಿರಾಸ್ತಿಯನ್ನು ಹೊಂದಿರತಕ್ಕದ್ದು.

32. ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.

33. ಶಾಲೆಯು ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಈ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

34. ಶಾಲೆ ಮತ್ತು ಶಾಲಾ ಆವರಣ, ಶಾಲೆಗಳಲ್ಲಿಯ ಮಕ್ಕಳ ಪ್ರವೇಶ ದಾಖಲಾತಿಗಳು ಎಲ್ಲರಿಗೂ ಮುಕ್ತವಾಗಿರತಕ್ಕದ್ದು.

35. ಶಾಲಾ ಕಟ್ಟಡವು ಪರೀಕ್ಷೆಗಳು, ತರಬೇತಿ, ಜನಗಣತಿ ಇತ್ಯಾದಿ ಇಲಾಖಾ ಕಾರ್ಯಗಳಿಗೆ ಲಭ್ಯವಾಗಿರತಕ್ಕದ್ದು.

36. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ) ನಿಯಮಗಳು, 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.

37. **ಸರ್ಕಾರದ ಆದೇಶ ಸಂಖ್ಯೆ:** ಇಡಿ 709 ಪಿಜಿಸಿ 2017 ದಿನಾಂಕ: 08-03-2018 ರಲ್ಲಿ ನಿಗದಿಪಡಿಸಿರುವಂತೆ ಸಂಸ್ಥೆಯು ಉದ್ದೇಶಿತ ಪ್ರೌಢ ಶಾಲೆಗೆ ಈ ಕೆಳಗಿನಂತೆ ಎಲ್ಲ ಮೂಲಭೂತ ಸೌಲಭ್ಯಗಳನ್ನು ಒದಗಿಸಿರತಕ್ಕದ್ದು.

➢ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಬಹುದಾದಂತಹ ಪರಿವರ್ತಿತ ಭೂಮಿ ಸಂಸ್ಥೆಯ ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ ಕನಿಷ್ಟ 30 ವರ್ಷಗಳು ಭೋಗ್ಯಕ್ಕೆ/ಲೀಸ್ ಮೇಲೆ (ಶಾಲಾ ಕಟ್ಟಡ ಮತ್ತು ಆಟದ ಮೈದಾನ) ಈ ಕೆಳಗಿನಂತೆ ಹೊಂದಿರತಕ್ಕದ್ದು.

i. ಪೂರ್ವ ಪ್ರಾಥಮಿಕದಿಂದ ಉನ್ನತ ಪ್ರೌಢ ಶಾಲೆವರೆಗೆ (ಪೂರ್ವ ಪ್ರಾಥಮಿಕದಿಂದ 12 ನೇ ತರಗತಿಯವರೆಗೆ) ಅಥವಾ ಪ್ರಾಥಮಿಕದಿಂದ ಪ್ರೌಢ ಶಾಲೆಯವರೆಗೆ (1 ರಿಂದ 10 ನೇ ತರಗತಿಯವರೆಗೆ) ಅಥವಾ ಪೂರ್ವ ಪ್ರಾಥಮಿಕದಿಂದ ಪ್ರೌಢ ಶಾಲೆಯವರೆಗೆ (ಪೂರ್ವ ಪ್ರಾಥಮಿಕದಿಂದ 10 ನೇ ತರಗತಿಯವರೆಗೆ) ಶಾಲೆ ಪ್ರಾರಂಭಿಸಲು :

| ಕ್ರ.ಸಂ | ಸ್ಥಳ | **ಹೊಂದಿರತಕ್ಕ ಭೂಮಿಯ ಮಿತಿ** |
|---|---|---|
| 1 | ಬಿಬಿಎಂಪಿ / ಇತರೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಪ್ರದೇಶಗಳು | 2000 ಸ್ಕ್ವೇರ್ ಮೀಟರ್ (19.76 ಗುಂಟೆ /ಅಂದಾಜು 20 ಗುಂಟೆ) |
| 2 | ಇತರೆ ಪ್ರದೇಶಗಳು | 4000 ಸ್ಕ್ವೇರ್ ಮೀಟರ್ (39.53 ಗುಂಟೆ/ ಅಂದಾಜು 1 ಎಕರೆ.)<br>(ಶೈಕ್ಷಣಿಕ ಉದ್ದೇಶಗಳಿಗೆ ಬಳಸಬಹುದಾದಂತಹ ಪರಿವರ್ತಿತ ಭೂಮಿ ಸಂಸ್ಥೆಯ ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ 30 ವರ್ಷಗಳ ಲೀಸ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಗಿರಬೇಕು.) |

ii. ಕೇವಲ ಪ್ರಾಥಮಿಕ ಶಾಲೆ (1 ರಿಂದ 8) ಅಥವಾ ಪ್ರೌಢ ಶಾಲೆ (9 ರಿಂದ 10) ಅಥವಾ ಪ್ರೌಢ ಶಾಲೆ ಮತ್ತು ಉನ್ನತ ಪ್ರೌಢ ಶಾಲೆವರೆಗೆ (9 ರಿಂದ 12) ಶಾಲೆ ಪ್ರಾರಂಭಿಸಲು :

| ಕ್ರ.ಸಂ. | ಸ್ಥಳ | **ಹೊಂದಿರತಕ್ಕ ಭೂಮಿಯ ಮಿತಿ** |
|---|---|---|
| 1 | ಬಿಬಿಎಂಪಿ / ಇತರೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಪ್ರದೇಶಗಳು | 1500 ಸ್ಕ್ವೇರ್ ಮೀಟರ್ (14.82 ಗುಂಟೆ/ಅಂದಾಜು 15 ಗುಂಟೆ) |
| 2 | ಇತರೆ ಪ್ರದೇಶಗಳು | 3000 ಸ್ಕ್ವೇರ್ ಮೀಟರ್ (29.65 ಗುಂಟೆ/ಅಂದಾಜು 30 ಗುಂಟೆ.)<br>(ಶೈಕ್ಷಣಿಕ ಉದ್ದೇಶಗಳಿಗೆ ಬಳಸಬಹುದಾದಂತಹ ಪರಿವರ್ತಿತ ಭೂಮಿ ಸಂಸ್ಥೆಯ ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ 30 ವರ್ಷಗಳ ಲೀಸ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಗಿರಬೇಕು.) |

iii. ಕೇವಲ ಪ್ರಾಥಮಿಕ ಶಾಲೆ (1 ರಿಂದ 8) ಅಥವಾ ಪ್ರೌಢ ಶಾಲೆ (9 ರಿಂದ 10) ಅಥವಾ ಉನ್ನ ಪ್ರೌಢ ಶಾಲೆವರೆಗೆ (9 ರಿಂದ 12 ) ಶಾಲೆ ಪ್ರಾರಂಭಿಸಲು :

| ಕ್ರ.ಸಂ | ಸ್ಥಳ | ಹೊಂದಿರತಕ್ಕ ಭೂಮಿಯ ಮಿತಿ |
|---|---|---|
| 1 | ಬಿಬಿಎಂಪಿ / ಇತರೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಪ್ರದೇಶಗಳು | 1000 ಸ್ಕ್ವೇರ್ ಮೀಟರ್ (9.88 ಗುಂಟೆ/ಅಂದಾಜು 10 ಗುಂಟೆ) |
| 2 | ಇತರೆ ಪ್ರದೇಶಗಳು | 2000 ಸ್ಕ್ವೇರ್ ಮೀಟರ್ (19.76 ಗುಂಟೆ/ಅಂದಾಜು 20 ಗುಂಟೆ.)<br>(ಶೈಕ್ಷಣಿಕ ಉದ್ದೇಶಗಳಿಗೆ ಬಳಸಬಹುದಾದಂತಹ ಪರಿವರ್ತಿತ ಭೂಮಿ ಸಂಸ್ಥೆಯ ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ 30 ವರ್ಷಗಳ ಲೀಸ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಗಿರಬೇಕು.) |

38. ಕಿರಿಯ ಪ್ರಾಥಮಿಕ ಶಾಲೆಗಳಿಗೆ 18X20 ಅಡಿ ಅಳತೆಯ ಕನಿಷ್ಟ 05 ಕೊಠಡಿಗಳು, ಹಿರಿಯ ಪ್ರಾಥಮಿಕ ಶಾಲೆಗೆ 18x20 ಅಡಿ ಅಳತೆಯ ಕನಿಷ್ಟ 8 ಕೊಠಡಿಗಳು ಮತ್ತು ಪ್ರೌಢ ಶಾಲೆಗೆ 18X20 ಅಡಿ ಅಳತೆಯ ಕನಿಷ್ಟ 09 ಕೊಠಡಿಗಳನ್ನು ಹೊಂದಿರತಕ್ಕದ್ದು. ಶೌಚಾಲಯ ಬಾಲಕರಿಗೆ-4, ಬಾಲಕಿಯರಿಗೆ-4 ಒಟ್ಟು 8 ಶೌಚಾಲಯಗಳನ್ನು ಹೊಂದಿರತಕ್ಕದ್ದು. ಕಟ್ಟಡ, ಆಟದ ಮೈದಾನ, ಕಂಪೌಂಡ್, ಕುಡಿಯುವ ನೀರಿನ ವ್ಯವಸ್ಥೆ ಹೊಂದಿರತಕ್ಕದ್ದು.

39. ಸರ್ಕಾರದ ಆದೇಶ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018 ರ ನಿಯಮ 5(ಎ) ಮತ್ತು ನಿಯಮ 7 ರ shedule ನಲ್ಲಿ ನಿಗದಿಪಡಿಸಿದಂತೆ ಮಕ್ಕಳ ಸುರಕ್ಷತೆಗಾಗಿ 1)Physical safety that includes infrastructure, 2)Health and transportation 3)Personal and Sexual safety 4)Social Emotional Safety 5) Cyber Safety and Emergency Preparedness and Disaster Management. ನಿಗದಿಪಡಿಸಲಾದ ಮಾನದಂಡಗಳನ್ನು ಪೂರೈಸಿರತಕ್ಕದ್ದು. ಇದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

40. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗಿಯೇ ರದ್ದಾಗುವುದು.

41. ಸರ್ಕಾರದ ಆದೇಶ ಸಂಖ್ಯೆ: ಇಡಿ 709 ಪಿಜಿಸಿ 2017, ದಿನಾಂಕ: 07-03-2018 ರಂತೆ ನಿಗದಿಪಡಿಸಿದ ಸಂಸ್ಥೆಯ ಅಧ್ಯಕ್ಷ/ಕಾರ್ಯದರ್ಶಿ ಹಾಗೂ ಉಪನಿರ್ದೇಶಕರವರ ಜಂಟಿ ಹೆಸರಿನಲ್ಲಿ ರೂ. 2 ಲಕ್ಷಗಳ ಸ್ಥಿರ ನಿಧಿಯನ್ನು ಶಾಲೆ ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ಇಡತಕ್ಕದ್ದು.

ಈ ಎಲ್ಲಾ ನಿಬಂಧನೆಗಳನ್ನು ಎರಡು ತಿಂಗಳೊಳಗಾಗಿ ಪೂರೈಸಿ ಮಾನ್ಯತೆ ಕುರಿತು ಅರ್ಜಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಈ ನೋಂದಣಿ/ಅನುಮತಿ ತನ್ನಿಂದ ತಾನೇ ರದ್ದಾಗುತ್ತದೆ.

ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೋಂದಣಿ ರದ್ದುಪಡಿಸಲಾಗುವುದು.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಧಾರವಾಡ

ಗೆ,

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಧಾರವಾಡ ಶಹರ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಅಧ್ಯಕ್ಷರು/ಕಾರ್ಯದರ್ಶಿಗಳು, ಕರ್ನಾಟಕ ಎಜ್ಯುಕೇಶನ್ ಬೋರ್ಡ್, ಸ್ಟೇಷನ್ ರಸ್ತೆ, ಮಾಳಮಡ್ಡಿ, ಧಾರವಾಡ

ಪ್ರತಿ ಗೌರವಪೂರ್ವಕವಾಗಿ ಮಾಹಿತಿಗಾಗಿ :
ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರಿಗೆ.

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಉಪನಿರ್ದೇಶಕರ ಕಚೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ,DHARWAD(2909)ಲ್ಲೆ

ದಿನಾಂಕ: 13-Dec-2022

[ನಿಯಮ 3 ಉಪನಿಯಮ 5 (ಬಿ)]

ಪ್ರಮಾಣ ಪತ್ರ ಸಂಖ್ಯೆ: 178398/ 2023-24

ಆಯುಕ್ತರ ಕಚೇರಿ ಸುತ್ತೋಲೆ ಸಂಖ್ಯೆ ಸಿ7(2).ಪ್ರಾಶಿಅ.ಹೊ.ಶಾ.ನೊಂ.01/2022-23/ಇ 909400 ದಿನಾಂಕ : 15-10-2022 ರಂತೆ ಕರ್ನಾಟಕ ಎಜ್ಯುಕೇಶನ್ ಬೋರ್ಡ್, ಸ್ಟೇಶನ್ ರಸ್ತೆ, ಮಾಳಮಡ್ಡಿ, ಧಾರವಾಡ -07 ಇವರ ಗೌವರ್ನಿಂಗ್ ಕೌನ್ಸಿಲಿಂಗ್ ಈ ಶಿಕ್ಷಣ ಸಂಸ್ಥೆಯ ಹೊಸ ಪ್ರಾಥಮಿಕ /ಪ್ರೌಢ ಶಾಲೆಯನ್ನು ಪ್ರಾರಂಭಿಸಲು ಸಲ್ಲಿಕೆಯಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ [ಕರ್ನಾಟಕ ಆಕ್ಟ್ 1995] ಸೆಕ್ಷನ್ 31 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಇಪಿ 75 ಪಿಜಿಸಿ 2022 ದಿ: 25-04-2022 ತೆ ಈ ಕೆಳಕಂಡ ಪೂರ್ವ ಪ್ರಾಥಮಿಕ ದಿಂದ ಹತ್ತನೇ ತರಗತಿ / ಒಂದರಿಂದ ಹತ್ತನೆ ತರಗತಿ (1-10) ಒಂದರಿಂದ ಐದನೇ ತರಗತಿ (1- 5) ಆರರಿಂದ ಎಂಟು (6-8) ಮತ್ತು ಒಂಬತ್ತು - ಹತ್ತನೆ ತರಗತಿ (9-10) ಪ್ರಾರಂಭಿಸಲು ಮಂಜೂರಾತಿ ನೀಡಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1.ಅರ್ಜಿ ಸಂಖ್ಯೆ : 230013

2.ಕ್ರಮ ಸಂಖ್ಯೆ : 178398

3.ಶಾಲೆಯ ಹೆಸರು ಮತ್ತು ವಿಳಾಸ : K E BOARD ENGLISH MEDIUM SCHOOL KELAGERI ROAD DHARWAD ( STATION ROAD, MALMADDI, DHARWAD )

4. ಅನುಮತಿ ನೀಡಿದ ತರಗತಿ : Upgradation from 6 to 8 (6 ರಿಂದ 8)

5. ಶೈಕ್ಷಣಿಕ ವರ್ಷ : 2023-24

6 ಅನುಮತಿ ನೀಡಿದ ಮಾಧ್ಯಮ : English

7.ಈ ಕಚೇರಿಯಲ್ಲಿನ ನೋಂದಣಿ ವಹಿಯಲ್ಲಿ ನೋಂದಾಯಿಸಿದ ಕ್ರಮ ಸಂಖ್ಯೆ /ಪುಟ ಸಂಖ್ಯೆ / ವಾಲ್ಯೂಂ ಸಂಖ್ಯೆ : 01/36/01/23-24

ಷರತ್ತುಗಳು:

ಈ ನೋಂದಣಿಯು ನಿಯಮ 3(5) (4) ಕ್ಕೆ ಒಳಪಟ್ಟಿರುತ್ತದೆ. :

ಗೌರ್ನಿಂಗ್ ಕೌನ್ಸಿಲ್ ಇವರು ನಿಯಮ4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು :

3. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿಯೇ ನಡೆಸತಕ್ಕದ್ದು.

4. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 ( ಕರ್ನಾಟಕ ಆಕ್ಟ್ ಸಂಖ್ಯೆ :1:96) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

5. ಶಾಲಾ ನಿವೇಶನ , ವಿಸ್ತೀರ್ಣ, ಕಟ್ಟಡ ಪೀಠೋಪಕರಣಗಳು, ಸಿಬ್ಬಂದಿ ವರ್ಗ , ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂಧರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ:

6. ಈ ಪ್ರೌಢಶಾಲಾ ನೋಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂ:ಇಡಿ 175 ಪಿ.ಎಂ.ಸಿ 95 ದಿನಾಂಕ:07-09-1998 ಮತ್ತು ದಿನಾಂಕ:29-12-1998 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ 50/- ಛಾಪಾ ಕಾಗದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿ ಒಪ್ಪಿಗೆ ಪತ್ರವನ್ನು ನೀಡುವುದು :

7. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

8. ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿದ ಪಠ್ಯ ಪುಸ್ತಕ , ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸಿಕೊಳ್ಳತಕ್ಕದ್ದು.

9. ತರಬೇತಿ ಹೊಂದಿದ ಹಾಗೂ ಇಲಾಖೆ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.

10. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

11. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.

12. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವ ಪ್ರಾರಂಭವಾದ ಮೂರು ತಿಂಗಳ ಒಳಗಾಗಿ ಈ ಕಚೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವು ಷರತ್ತುಗಳನ್ನು ಪಾಲಿಸದಿದ್ದರೂ ಆದೇಶ ತಂತಾನೆ ರದ್ದಾಗುತ್ತದೆ.

13. ಶಾಲೆಯ ಕಟ್ಟಡ ಸುರಕ್ಷತೆ ಬಗ್ಗೆ ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಅವಘಡಗಳಿಂದ ಸುರಕ್ಷಿತವಾಗಿರುವ ಬಗ್ಗೆ ಪರಿಶೀ ಖಚಿತಪಡಿಸಿಕೊಳ್ಳುವುದು. ಶಾಲಾ ಆವರಣದಲ್ಲಿ 100 ಗಜಗಳ ಅಂತರದಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇಧಿ ಎಂದು ಶಾಲಾ ಮುಂಬಾಗದಲ್ಲಿ ಪ್ರಕಟಣೆ ನೀಡುವುದು.

14. ಶಾಲಾ ಆಡಳಿತ ಮಂಡಳಿ ಯಾವುದೇ ತಪ್ಪು ಮಾಹಿತಿಗಳನ್ನು ನೀಡಿದ್ದಲ್ಲಿ ನೋಂದಣಿಯನ್ನು ರದ್ದುಪಡಿಸುವ ಅಧಿಕಾ ಇಲಾಖೆ ಕಾಯ್ದಿರಿಸಿಕೊಂಡಿದೆ.

15. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 369 ಪಿ.ಜಿ.ಸಿ 2014 ದಿನಾಂಕ:11-11-2014 ರಂತೆ ಮತ್ತು ಈ ಕಚೇರಿ ಸುತ್ತೋಲೆ ದಿನಾಂಕ:1 11-2014 ರಂತೆ ಷರತ್ತುಗಳನ್ನು ಪಾಲಿಸುವುದು.

16. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 709 ಪಿ.ಜಿ.ಸಿ.2017 ದಿನಾಂಕ:07-03-2018 ರಂತೆ ಮತ್ತು ಈ ಕಚೇರಿ ಸುತ್ತೋಲೆ ದಿನಾಂ 25-11-2019 ರಂತೆ ಷರತ್ತುಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

17. ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಜಿಬಿ (1) 502/2004 ದಿನಾಂಕ:08-07-2020 ರಂತೆ ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ . ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ ಶಾಮಕ ಮತ್ತು ತುರ್ತು ಸೇವೆಗಳು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಜಿಬಿಸಿ (1) 502/2004 ದಿನಾಂಕ: 08-07-2020 ಸಕ್ಷ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಕಾಲಕಾಲಕ್ಕೆ ನವೀಕರಿಸಿ ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸುವುದು.

18. ಕಟ್ಟಡ ಸುರಕ್ಷತೆಗೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಕಾಲ-ಕಾಲಕ್ಕೆ ಸಕ್ಷಮ ಪ್ರಾಧಿಕಾರದಿಂದ ನವೀಕರಿಸಿ ಸಂಬಂಧಿಸಿ ಉಪನಿರ್ದೇಶಕರಿಗೆ ಸಲ್ಲಿಸುವುದು.

19. ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಿದ ದಾಖಲೆಗಳು ನೈಜತೆಯಿಂದ ಕೂಡಿರದಿದ್ದಲ್ಲಿ ಈ ಆದೇಶವು ತಂತಾನೆ ರದ್ದಾಗುತ್ತದೆ.

20. ಶಾಲೆಯಲ್ಲಿ ಕಡ್ಡಾಯವಾಗಿ ಸೇವಾ ಭದ್ರತೆ ನಿಯಮಗಳನ್ನು ಪಾಲಿಸತಕ್ಕದ್ದು.

21. ಪ್ರಥಮ ಮಾನ್ಯತೆ ನೀಡುವ ಸಂದರ್ಭದಲ್ಲಿ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲಾದ ಮೂಲ ದಾಖಲೆಗಳಾದ ಪರಿವರ್ತನ ಭೂ ದಾಖಲೆ, ಕಟ್ಟಡ ಸುರಕ್ಷತಾ ಪ್ರಮಾಣ ಹಾಗೂ ಅಗ್ನಿ ಸುರಕ್ಷತಾ ಪ್ರಮಾಣ ಪತ್ರಗಳ ನೈಜತೆ ಖಚಿತಪಡಿಸಿಕೊಂಡ ನಂತರವೇ ಪ್ರಥ ಮಾನ್ಯತೆ ನೀಡತಕ್ಕದ್ದು.

22. ಪ್ರಥಮ ಮಾನ್ಯತೆಗಾಗಿ ಈ ಕಚೇರಿಗೆ ಪ್ರಸ್ತಾವನೆ ಸಲ್ಲಿಸುವುದು. ಶಿಕ್ಷಣ ಕಾಯ್ದೆ ಮತ್ತು ಸರ್ಕಾರದ ಆದೇಶ ದಿನಾಂಕ: 30-09-20 ರ ಅನುಬಂಧ -03 ರ ಚೆಕ್ ಲಿಸ್ಟ್ ಮಾಹಿತಿ ಪಡೆದು ಈ ಆಧಾರದ ಮೇಲೆ ಶಾಲೆ ಪ್ರಾರಂಭಿಸಿದ ಮೂರು ತಿಂಗಳೊಳಗೆ ಕಡ್ಡಾಯವಾ ಪ್ರಥಮ ಮಾನ್ಯತೆ ಪಡೆಯುವುದು. ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದಿದ್ದಲ್ಲಿ ನೋಂದಣಿ ತಂತಾನೆ ರದ್ದಾಗುತ್ತ ನೋಂದಣಿ ಆದೇಶದಲ್ಲಿರುವ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ಉಪನಿರ್ದೇಶಕರು (ಆಡಳಿತ) ಮತ್ತು
ನೋಂದಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ,
DHARWAD(2909) ಜಿಲ್ಲೆ

ಇವರಿಗೆ,

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ DHARWAD CITY(290907) ತಾಲ್ಲೂಕು,DHARWAD(2909)ಲ್ಲೆ.
2. ಕಾರ್ಯದರ್ಶಿಗಳು DATTATRAYA S RAJAPUROHIT
3. ಕಚೇರಿ ಪ್ರತಿ